ಕರ್ನಾಟಕ ಸರ್ಕಾರ

ಪೌರಾಡಳಿತ ಇಲಾಖೆ

# ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯ


ಬಾಶೆಟ್ಟಿಹಳ್ಳಿ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

itstaff.ulb.bashettihalli1@gmail.com


ಸಂಖ್ಯೆ: ಬಾ.ಪ.ಪಂ/ತಾಂ.ಶಾ/ಸಿ.ಆರ್/66/2022–23 ದಿನಾಂಕ: 17/02/2023

ರವರಿಗೆ

ಮಾನ್ಯ ಸದಸ್ಯ ಕಾರ್ಯದರ್ಶಿಗಳು

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ದೊಡ್ಡಬಳ್ಳಾಪುರ.

## "ನಿರಾಕ್ಷೇಪಣಾ ಪತ್ರ"

ಮಾನ್ಯರೇ,

**ವಿಷಯ:** ಬಿಸುವನಹಳ್ಳಿ ಗ್ರಾಮದ ಸ.ನಂ.61 ರಲ್ಲಿ 2.00 ಎಕರೆ ವಿಸ್ತೀರ್ಣದ ಜಮೀನಲ್ಲಿ ತಾತ್ಕಾಲಿಕ ಅನುಮೋದನೆಯಾಗಿರುವ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ವಸತಿ ನಿವೇಶನಗಳನ್ನು ನೊಂದಣೆಗಾಗಿ ಬಿಡುಗಡೆ ಮಾಡಲು ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.

**ಉಲ್ಲೇಖ:** ತಮ್ಮ ಕಚೇರಿ ಪತ್ರದ ಸಂಖ್ಯೆ:ಡಿಪಿಎ/ಟಿಪಿ/ಎಲ್‌ಎಓ/09/2020–21/923, ದಿನಾಂಕ: 10/11/2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ ಪತ್ರದನ್ವಯ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬಿಸುವನಹಳ್ಳಿ ಗ್ರಾಮದ ಸ.ನಂ.61 ರಲ್ಲಿ 2.00 ಎಕರೆ ವಿಸ್ತೀರ್ಣದಲ್ಲಿ ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ. ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸದಂತೆ, ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಮನವಿ ಸಲ್ಲಿಸಿದ್ದು, ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕಾಮಗಾರಿ ಮುಕ್ತಾಯಗೊಳಿಸಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ನೀಡುವಂತೆ ಕೋರಿರುವುದು ಸರಿಯಷ್ಟೆ.

ಮೇಲ್ಕಂಡ ಸ್ವತ್ತಿನ ಸ್ಥಳ ಪರಿಶೀಲನೆ ಮಾಡಲಾಗಿದ್ದು, ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಬೀದಿ ದೀಪ, ಕುಡಿಯುವ ನೀರಿನ ವ್ಯವಸ್ಥೆ, ಉದ್ಯಾನವನ ನಿರ್ಮಾಣಗಳಂತಹ ಸಿವಿಲ್ ಸ್ವರೂಪದ ಕಾಮಗಾರಿಗಳು ಪೂರ್ಣಗೊಂಡಿದ್ದು, ವಿದ್ಯುತ್ ಸೌಲಭ್ಯವನ್ನು ಒದಗಿಸಿರುವ ಬಗ್ಗೆ ಸಕ್ಷಮ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಷರತ್ತಿಗೆ ಒಳಪಟ್ಟು ಈ ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

ತಮ್ಮ ವಿಶ್ವಾಸಿ

ಮುಖ್ಯಾಧಿಕಾರಿ

ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ.